ಎ ಪಿ ಎಂ ಸಿ ವ್ಯಾಪ್ತಿಯಲ್ಲಿ ಬರತಕ್ಕ ಪೊಲೀಸ್ ಠಾಣೆಗೆ ಅಪ್‌ಗ್ರೇಡ್ ಮಾಡಿ ಬೇಕಾದರೆ ಅಲ್ಲಿ ಟ್ರಾಫಿಕ್ ಪೊಲೀಸರನ್ನು ಇಲ್ಲವೇ ರೆಗ್ಯುಲರ್ ಪೊಲೀಸರನ್ನು ನಾಲ್ಕು ಜನರನ್ನು ಹಾಕತಕ್ಕ ವ್ಯವಸ್ಥೆ ಮಾಡುತ್ತೇವೆ ಇಲ್ಲದಿದ್ದರೆ ಔಟ್ ಪೋಸ್ಟ್ ಮಾಡುವುದು ಸೂಕ್ತವಂಬ ವರದಿ ನಮಗೆ ಕೆಳಗಿನಿಂದ ಬಂದರೆ ಖಂಡಿತವಾಗಿ ಅದನ್ನೂ ಪರಿಶೀಲನೆ ಮಾಡಿಸುತ್ತೇನೆ

ಹುಬ್ಬಳ್ಳಿ-ಧಾರವಾಡ ಮಹಾನಗರಕ್ಕೆ ಮೆಗಾಸಿಟಿ ಯೋಜನೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 5(392)

ಸದಸ್ಯರ ಹೆಸರು ಶ್ರೀ ಹೊನ್ನಳ್ಳಿ ಜಬ್ಬಾರ್‌ಖಾನ್ ಹೈಯತ್ ಖಾನ್(ಹುಬ್ಬಳ್ಳಿ)

ಉತ್ತರಿಸಬೇಕಾದ ಸಚಿವರು ಮಾನ್ಯ ಡಿ ಬಿ ಚಂದ್ರೇಗೌಡ(ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಮತ್ತು ಕೆಯುಐಡಿಎಫ್‌ಸಿ)

ಪ್ರಶ್ನೆ

1) ಮೆಗಾಸಿಟಿ ಯೋಜನೆ ಕೇವಲ ಬೆಂಗಳೂರು ನಗರಕ್ಕೆ ಮಾತ್ರ ಸೀಮಿತವಾಗಿದೆಯೇ?

2) ಹುಬ್ಬಳ್ಳಿ-ಧಾರವಾಡ ಮಹಾನಗರ ಮೆಗಾಸಿಟಿ ಪ್ಲಾನ್ ಅಳವಡಿಸುವ ಯೋಜನೆ ಸರ್ಕಾರದ ಮುಂದಿದೆಯೇ?

3) ಇಲ್ಲವಾದಲ್ಲಿ ಕಾರಣವೇನು?

ಉತ್ತರ

1) ಕೇಂದ್ರ ಪುರಸ್ಕೃತ ಮೆಗಾಸಿಟಿ ಯೋಜನೆಯು ನಗರಾಭಿವೃದ್ಧಿ ಮತ್ತು ಉದ್ಯೋಗ ಸಚಿವಾಲಯ ಭಾರತ ಸರ್ಕಾರ ಆಡಳಿತಕ್ಕೊಳಪಟ್ಟಿದ್ದು ಮುಂಬೈ ಕೊಲ್ಕತ್ತಾ ಚೆನ್ನೈ, ಹೈದರಾಬಾದ್ ಮತ್ತು ಬೆಂಗಳೂರು ನಗರಗಳಿಗೆ ಮಾತ್ರ ಸೀಮಿತವಾಗಿರುತ್ತದೆ

2) ಇಲ್ಲ

3) ಹುಬ್ಬಳ್ಳಿ-ಧಾರವಾಡ ನಗರಗಳು ಕೇಂದ್ರ ಸರ್ಕಾರದಿಂದ ಮೆಗಾಸಿಟಿ ಯೋಜನೆಯಡಿಯಲ್ಲಿ ಸಹಾಯ ಪಡೆಯಲು ಗುರುತಿಸಲ್ಪಟ್ಟಿಲ್ಲ

ಶ್ರೀ ಹೊನ್ನಾಳಿ ಜಬ್ಬಾರ್ ಖಾನ್ ಹೈಯತ್ ಖಾನ್ ಮಾನ್ಯ ಅಧ್ಯಕ್ಷರೆ, ಮೆಗಾಸಿಟಿ ಕಾರ್ಯಕ್ರಮದ ಅಡಿಯಲ್ಲಿ ಹುಬ್ಬಳ್ಳಿ-ಧಾರವಾಡ ನಗರಗಳು ಕರ್ನಾಟಕ ರಾಜ್ಯದ ಎರಡನೇ ದೊಡ್ಡ ಮಹಾ ನಗರಗಳಾಗಿವೆ ಆದರೆ ಅಲ್ಲಿ ಮೂಲಭೂತ ಸೌಕರ್ಯಗಳಾದ ನೀರು ಸರಬರಾಜಾಗಲಿ, ಯು ಜಿ ಡಿ ರಸ್ತೆ ವಿದ್ಯುತ್ ಪೂರೈಕೆ ಎಲ್ಲಾದರಲ್ಲೂ ಕುಂಠಿತವಾಗುತ್ತಿದೆ ಆದ್ದರಿಂದ ರಾಜ್ಯದ ಎರಡನೇ ಮಹಾ ನಗರವಾದ ಹುಬ್ಬಳ್ಳಿ-ಧಾರವಾಡವನ್ನು ಮೆಗಾಸಿಟಿ ಕಾರ್ಯಕ್ರಮದ ಅಡಿಯಲ್ಲಿ ಸೇರಿಸಲು ಆಗುವುದಿಲ್ಲವೆ? ಸೇರಿಸದಿದ್ದರೆ ಕಾರಣವೇನು ಎಂಬುದನ್ನು ಮಾನ್ಯ ನಗರಾಭಿವೃದ್ಧಿ ಸಚಿವರಲ್ಲಿ ಕೇಳಬಯಸುತ್ತೇನೆ

ಶ್ರೀ ಡಿ ಬಿ ಚಂದ್ರೇಗೌಡ ಮಾನ್ಯ ಅಧ್ಯಕ್ಷರೆ, ಮೆಗಾಸಿಟಿ ಯೋಜನೆಯ ಬಗ್ಗೆ ಕೇಳಿದ್ದಾರೆ ಇದು ಮೆಗಾಸಿಟಿಗಳಿಗೆ ಮಾತ್ರ ಸೀಮಿತವಾಗಿದೆ ನಮ್ಮ ದೇಶದಲ್ಲಿರುವ ಮೆಗಾಸಿಟಿಗಳು ಐದು ಅವುಗಳು ಬೆಂಗಳೂರು, ಕಲ್ಕತ್ತಾ ಚೆನ್ನೈ, ಹೈದ್ರಾಬಾದ್, ಮುಂಬೈ, ಹುಬ್ಬಳ್ಳಿ-ಧಾರವಾಡ ಮೆಗಾಸಿಟಿ ವ್ಯಾಪ್ತಿಯಲ್ಲಿ ಬರುವುದಿಲ್ಲ ಆದ್ದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ

ಶ್ರೀ ಜಗದೀಶ್ ಶೆಟ್ಟರ್ ಮಾನ್ಯ ಅಧ್ಯಕ್ಷರೆ, ಅವರು ಈ ಪ್ರಶ್ನೆಯನ್ನು ಬೇರೆ ಅರ್ಥದಲ್ಲಿ ಕೇಳಿದ್ದರು ಮೆಗಾಸಿಟಿ ಪ್ರಶ್ನೆ ಇಲ್ಲಿ ಬರುವುದಿಲ್ಲ ಬೆಂಗಳೂರು ಬಿಟ್ಟರೆ ಕರ್ನಾಟಕದಲ್ಲಿ ದೊಡ್ಡ ನಗರವೆಂದರೆ ಹುಬ್ಬಳ್ಳಿ-ಧಾರವಾಡ ಆದರೆ ಅಲ್ಲಿ ಹತ್ತು ದಿವಸಕ್ಕೆ ಒಂದು ಸಲ ಕುಡಿಯುವ ನೀರನ್ನು ಒದಗಿಸುವ ಸಮಸ್ಯೆ ಇದೆ ಆ ರೀತಿ ಗಂಭೀರವಾದ ಪರಿಸ್ಥಿತಿ ಇದೆ ಅಲ್ಲಿ 44 ಕೋಟಿ ರೂಪಾಯಿಗಳ ವೆಚ್ಚದ ಕುಡಿಯುವ ನೀರನ್ನೊದಗಿಸುವ ಕೆಲಸ ನಡೆಯುತ್ತಿದ್ದ ವೈಪ್ ರೀವ್ಲೇನ್‌ಮೆಂಟ್ ಕೆಲಸ ನಡೆಯುತ್ತಿದೆ ಆದರೆ ಸರ್ಕಾರದಿಂದ ಹುಡ್ಕೋ ಸಾಲಕ್ಕೆ ಇದುವರೆಗೆ ಗ್ಯಾರಂಟಿಯನ್ನು ಕೊಟ್ಟಿಲ್ಲ ಅಲ್ಲಿನ ಮೇಯರ್, ನಾವು ಎಲ್ಲರೂ ಸೇರಿ ಸಾಕಷ್ಟು ಸಲ ಮನವಿ ಪತ್ರವನ್ನು ಮುಖ್ಯಮಂತ್ರಿಯವರಿಗೆ ಇತರರಿಗೆಲ್ಲರಿಗೂ ಕೊಟ್ಟಿದ್ದೇವೆ ಮಾನ್ಯ ಮುಖ್ಯಮಂತ್ರಿಗಳು ಇದಕ್ಕೆ ಸ್ಪಂದಿಸುವುದಾಗಿ ಹೇಳಿದ್ದರು ಆದರೆ ಇದುವರೆಗೆ ಹುಡ್ಕೋ ಸಾಲಕ್ಕೆ ಸರ್ಕಾರದಿಂದ ಗ್ಯಾರಂಟಿ ಸಿಗಲಿಲ್ಲ ಅನಂತರ ಕಿಯೋನಿಕ್ಸ್ ಸಾಫ್ಟ್‌ವೇರ್ ಟೆಕ್ನಾಲಜಿ ಪಾರ್ಕ್ ಅಲ್ಲಿ ಈಗಾಗಲೇ ತಯಾರಾಗಿದೆ ಅದಕ್ಕೆ ಕಾರ್ಪೊರೇಷನ್‌ನವರೇನು ಬಿಲ್ಡಿಂಗ್‌ನ್ನು ಕೊಟ್ಟಿದ್ದಾರೆ ಅದಕ್ಕೆ ಹತ್ತು ಕೋಟಿ ರೂಪಾಯಿ ಕಾರ್ಪೊರೇಷನ್‌ಗೆ ಕಿಯೋನಿಕ್ಸ್‌ನಿಂದ ಒರಬೇಕು ಅದು ಇಲ್ಲಿಯವರೆಗೆ ಸರ್ಕಾರದಿಂದ ಬಂದಿಲ್ಲ ಇದರಿಂದಾಗಿ ಬಹಳ ಶೋಚನೀಯವಾದ ಸ್ಥಿತಿಯಲ್ಲಿ ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ಇದೆ ಯಾವುದೇ ಅಭಿವೃದ್ಧಿ ಕೆಲಸಗಳು ಆಗುತ್ತಿಲ್ಲ ಮಾನ್ಯ ಮುಖ್ಯಮಂತ್ರಿಯವರೇನು ಬೆಂಗಳೂರಿಗೆ ಹೆಚ್ಚು ಲಕ್ಷ್ಯವನ್ನು ಕೊಡುತ್ತಾರೆ, ಅದರಲ್ಲಿ

ಇವತ್ತು ಪರ್‌ಸೆಂಟ್ ಆ ಭಾಗಕ್ಕೆ ಕೊಟ್ಟರೆ ಅತ್ಯಂತ ಅವಶ್ಯಕವಾದ ಮೂಲಭೂತ ಸೌಲಭ್ಯಗಳನ್ನು ಪಡೆದುಕೊಳ್ಳಲು ಅನುಕೂಲವಾಗುತ್ತದ ಅಲ್ಲಿ ಒಹಳ ಶೋಚನೀಯ ಪರಿಸ್ಥಿತಿ ಇದೆ ಅದರ ಬಗ್ಗೆ ತಾವು ಗಮನಹರಿಸಬೇಕಾಗಿ ನನ್ನ ವಿನಂತಿ

ಶ್ರೀ ಡಿ ಬಿ ಚಂದ್ರೇಗೌಡ ಮಾನ್ಯ ಅಧ್ಯಕ್ಷರೆ ಅವರು ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ ಅದಕ್ಕೆ ಸೆವರೇಟ್ ನೋಟೀಸ್ ಬೇಕಾಗುತ್ತದೆ ಅವೆಲ್ಲವನ್ನೂ ನಾನು ಮಾರ್ಕ್ ಮಾಡಿಕೊಂಡಿದ್ದೇನೆ ಅವರಿಗೆ ಮಾಹಿತಿಯನ್ನು ಒದಗಿಸಿಕೊಡುವ ಪ್ರಯತ್ನ ಮಾಡುತ್ತೇನೆ ಅವರ ಕಳಕಳಿ ಏನು ಎಂಬುದು ನನಗ ಅರ್ಥವಾಗಿದೆ

ಶ್ರೀ ಚಂದ್ರಕಾಂತ್ ಬೆಲ್ಲದ್ ಮಾನ್ಯ ಅಧ್ಯಕ್ಷರೆ, ಮೆಗಾಸಿಟಿ ಪ್ರಶ್ನೆ ಇಲ್ಲಿ ಬಾರದಿದ್ದರೂ ಹುಬ್ಬಳ್ಳಿ-ಧಾರವಾಡ ನಗರದ ದೃಷ್ಟಿಯಿಂದ, ಬೆಂಗಳೂರಿನ ನಂತರ ಎರಡನೇ ಮಹಾ ನಗರ ಕರ್ನಾಟಕದಲ್ಲಿ ಹುಬ್ಬಳ್ಳಿ-ಧಾರವಾಡವಾಗಿದ್ದು ಇವತ್ತಿಗೂ ಅದರ ಬಗ್ಗೆ ಏಕೆ ಸರ್ಕಾರ ನಿರ್ಲಕ್ಷ್ಯ ವಹಿಸುತ್ತಿದೆ? ಮೂಲಭೂತ ಸೌಲಭ್ಯವಾದ ಕುಡಿಯುವ ನೀರಿನ ಪ್ರಶ್ನೆಯೇ ಮುಖ್ಯವಾಗಿದೆ ಅನೇಕ ಯೋಜನೆಗಳ ಮೂಲಕ ನಗರದ ಅಭಿವೃದ್ಧಿಯನ್ನು ಮಾಡಬೇಕಾಗುತ್ತದೆ ತಮಗೆ ಬೆಂಗಳೂರು ಒಂದೇ ಕಾಣುತ್ತಿದೆಯೇ ಹೇಗೆ? ಮೈಸೂರು ಒಂದೇ ಕಾಣಿಸುತ್ತಿದೆಯೇ ಹೇಗೆ? ಇವತ್ತು ಹುಬ್ಬಳ್ಳಿ-ಧಾರವಾಡ ನಗರಗಳನ್ನು ರಾಜ್ಯದಲ್ಲಿ ಪ್ರಮುಖವಾದ ಎರಡನೇ ಮಹಾನಗರ ಎಂದು ಏನು ಹೇಳುತ್ತಿದ್ದೇವೆ ಅಲ್ಲಿ ಮೂಲಭೂತ ಸೌಲಭ್ಯಗಳು ಎಂದು ಏನು ಇರಬೇಕು ಅವು ಇಲ್ಲದೇ ಬಹಳ ಚಿಂತಾಜನಕವಾದ ಪರಿಸ್ಥಿತಿ ಉಂಟಾಗಿದ ಇದ್ದರಿಂದ ಸರ್ಕಾರ ದಯವಿಟ್ಟು ಆ ಕಡೆ ಲಕ್ಷ್ಯ ಕೊಡಬೇಕು ಈ ಬಗ್ಗೆ ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಮತ್ತು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ

ಶ್ರೀ ಡಿ ಬಿ ಚಂದ್ರೇಗೌಡ ಮಾನ್ಯ ಅಧ್ಯಕ್ಷರೇ, ಮೂಲಭೂತ ಸೌಲಭ್ಯಗಳನ್ನು ಒದಗಿಸಬೇಕು ಎನ್ನುವುದರಲ್ಲಿ ಯಾರಿಗೂ ಎರಡಾಭಿಪ್ರಾಯ ಇಲ್ಲನೇ ಇಲ್ಲ ಅದೂ ಹುಬ್ಬಳ್ಳಿ ಧಾರವಾಡದಂತಹ ಮಹಾನಗರಕ್ಕೆ ಬೇಕಾಗಿರತಕ್ಕಂಥ ಕುಡಿಯುವ ನೀರು ಮತ್ತೊಂದು ವಿಚಾರಗಳನ್ನು ಅವರು ಏನು ಪ್ರಸ್ತಾಪ ಮಾಡಿದ್ದಾರೆ ಅದು ನನ್ನ ಇಲಾಖೆಗೆ ಬಾರದೆ ಇರುವುದರಿಂದ ನಾನು ಅವರಿಗೆ ಉತ್ತರ ಒದಗಿಸುವುದು ಕಷ್ಟ ಆದ್ದರಿಂದ ತಾವು ಅಭಿವ್ಯಕ್ತ ಮಾಡಿದ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಆ ಇಲಾಖೆಯ ಮಂತ್ರಿಗಳ ಗಮನಕ್ಕೆ ತರುತ್ತೇನೆ

ಸೋಮವಾರಪೇಟೆ ನಗರಕ್ಕೆ ಕುಡಿಯುವ ನೀರಿನ ಸರಬರಾಜು